# ಅಪೂರ್ವ ಅಪ್ಪುಗೆ



**ಅಂಗಳದಲ್ಲಿ ಮೆಸ್ಸಿ ಹಾಗೂ ಎಂಬಾಪೆ ಅಪ್ಪಿಕೊಂಡರು. ಆಟದ ನಂತರ ಇಡೀ ಕ್ರೀಡಾಜಗತ್ತು ಆ ಇಬ್ಬರು ಆಟಗಾರರನ್ನು ಅಪ್ಪಿಕೊಂಡಿತು.**

■ ವಿ.ಆರ್.

ಕ್ರೀಡಾಜಗತ್ತಿನ ಇಬ್ಬರು ಚಾಂಪಿಯನ್‌ಗಳು ಅಪ್ಪಿಕೊಂಡಿರುವ ಈ ಫೋಟೊ ತುಂಬಾ ದಿನಗಳ ಕಾಲ ನೆನಪಿನಗಣಿಯಲ್ಲಿ ಅಚ್ಚಳಿಯದೆ ಉಳಿಯುವಂತಹದ್ದು. ಇಬ್ಬರೂ ಚಾಂಪಿಯನ್‌ಗಳು. ಮಾಂತ್ರಿಕ ಕಾಲುಗಳ ಚಳಕದಿಂದ ವಿಶ್ವವನ್ನೇ ನಿಬ್ಬೆರಗಾಗಿಸಿದ ಕ್ರೀಡಾಕಲಿಗಳು. ಒಬ್ಬಾತ, ಫ್ರಾನ್ಸ್‌ನ ಕಿಲಿಯನ್ ಎಂಬಾಪೆ, ಮತ್ತೊಬ್ಬರು ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ.

ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ಫೈನಲ್ ಪಂದ್ಯ (ಡಿ. 18) ಆರಂಭಕ್ಕೂ ಮುನ್ನ ಮೆಸ್ಸಿ ಮತ್ತು ಎಂಬಾಪೆ ಪರಸ್ಪರ ಅಪ್ಪಿಕೊಂಡರು. ಇಬ್ಬರ ಅನುಭವ ಹೇಗಿತ್ತೋ ಏನೋ? ಆ ದೃಶ್ಯ ಕಂಡವರ ಮೈಯಲ್ಲಂತೂ ವಿದ್ಯುತ್‌ಸಂಚಾರ. ಫೈನಲ್ ಸೆಣಸನ್ನು ಎಂಬಾಪೆ ಮತ್ತು ಮೆಸ್ಸಿ ನಡುವಣ ಸೆಣಸಾಟವೆಂದೇ ಬಿಂಬಿಸಲಾಗಿತ್ತು. ಮೈದಾನದಲ್ಲಿ ನಡೆದುದು ಅದೇ. ಇಬ್ಬರೂ ತಮ್ಮ ತಂಡದ ಪರವಾಗಿ ಅತ್ಯುತ್ತಮ ಆಟ ಆಡಿದರು. ಎಂಬಾಪೆ ಗುಡುಗು ಸಿಡಿಲಿನಂತೆ, ಮೆಸ್ಸಿ ಮಳೆಯಂತೆ ಕಾಣಿಸಿದರು. ಅದೃಷ್ಟ ಅರ್ಜೆಂಟೀನಾ ಪರವಾಗಿತ್ತು. ಅನುಭವ, ಪ್ರತಿಭೆಯೊಂದಿಗೆ ಅದೃಷ್ಟವೂ ಮೆಸ್ಸಿ ಬಳಗದ ಕೈ ಹಿಡಿಯಿತು. ಗೆಲುವಿನ ಬಳಗದಲ್ಲಿದ್ದ ಮೆಸ್ಸಿ ತಮ್ಮ ಜೀವಮಾನದ ಅತ್ಯುತ್ತಮ ಕ್ಷಣವನ್ನು ಎದುರುಗೊಂಡಿದ್ದರು. ಸೋತರೂ ಕೋಟ್ಯಂತರ ಕ್ರೀಡಾಭಿಮಾನಿಗಳ ಪಾಲಿಗೆ ಎಂಬಾಪೆ ಕಣ್ಮಣಿಯಾಗಿಬಿಟ್ಟರು.

ಫಲಿತಾಂಶ ಏನೇ ಇರಲಿ. ಅಂಗಳದಲ್ಲಿ ಮೆಸ್ಸಿ ಹಾಗೂ ಎಂಬಾಪೆ ಅವರ ನಡವಳಿಕೆ ಆಟದ ಘನತೆಯನ್ನು ಹೆಚ್ಚಿಸುವಂತಿತ್ತು. ಪಂದ್ಯಕ್ಕೆ ಮೊದಲು ಇಬ್ಬರೂ ಅಪ್ಪಿಕೊಂಡಿದ್ದು ಪರಸ್ಪರ ಗೌರವವನ್ನಷ್ಟೇ ಸೂಚಿಸುತ್ತಿರಲಿಲ್ಲ; ಆ ನಡವಳಿಕೆ, ಆಟಗಾರರ ಕ್ರೀಡಾಸ್ಫೂರ್ತಿಯನ್ನೂ ಎತ್ತರಕ್ಕೊಯ್ಯುವಂತಿತ್ತು. ವ್ಯಕ್ತಿಯ ಮೂಲಕ ಹಾಗೂ ತಂಡಗಳ ಮೂಲಕ ಗೆಲುವನ್ನು ಗುರ್ತಿಸಲಾಗುತ್ತದೆ, ಆಚರಿಸಲಾಗುತ್ತದೆ. ಆದರೆ, ಆ ಗೆಲುವನ್ನು ಆಟದ ಮೂಲಕ ಗುರ್ತಿಸುವ ಸಂಕೇತದಂತಿತ್ತು, ಮೆಸ್ಸಿ–ಎಂಬಾಪೆ ಅಪ್ಪುಗೆ.

ಒಂದು ಅಪ್ಪುಗೆ ಏನೆಲ್ಲ ಸೂಚಿಸುತ್ತದೆ? ಅದು, ಅಗಣಿತ ಮೌಲ್ಯದ ಭಾವನೆಗಳ ಅಭಿವ್ಯಕ್ತಿ. ಮಾತಿನಿಂದ ಸಾಧ್ಯವಾಗದ್ದು, ಕಣ್ಣ ತೇವಕ್ಕೆ ದಕ್ಕದೆ ಹೋದುದು, ಅಪ್ಪುಗೆಯಿಂದ ಸಾಧ್ಯವಾಗುತ್ತದೆ. ಫುಟ್ಬಾಲ್ ಪಂದ್ಯವನ್ನು ಅನೇಕರು ಯುದ್ಧದಂತೆಯೇ ಚಿತ್ರಿಸುತ್ತಾರೆ. ಆದರೆ, ಈ ಅಪ್ಪುಗೆ ಹಾಗೂ ಅಂಗಳದಲ್ಲಿ ನಡೆದ ಆಟದ ಪರಿಣಾಮ ಯುದ್ಧದಂತಿರಲಿಲ್ಲ. ಅದೊಂದು ಕಾವ್ಯದಂತಿತ್ತು. ಎರಡು ತಂಡಗಳು ಕಾಲ್ಚೆಂಡಿನಾಟದ ಸೊಬಗು ಹಾಗೂ ರೋಚಕತೆಯನ್ನು ಎತ್ತರಕ್ಕೊಯ್ಯಲು ಶ್ರಮಿಸಿದಂತಿತ್ತು.

ಅಂಗಳದಲ್ಲಿ ಮೆಸ್ಸಿ ಹಾಗೂ ಎಂಬಾಪೆ ಅಪ್ಪಿಕೊಂಡರಲ್ಲ; ಆಟದ ನಂತರ ಇಡೀ ಕ್ರೀಡಾಜಗತ್ತು ಆ ಇಬ್ಬರು ಆಟಗಾರರನ್ನು ಅಪ್ಪಿಕೊಂಡಿತ್ತು. ಹೀಗೆ ಅಪ್ಪಿಕೊಳ್ಳುವುದು ಎಲ್ಲರಿಗೂ ಸುಲಭವಲ್ಲ.

ಪ್ರತಿಕ್ರಿಯಿಸಿ: feedback@sudha.co.in